doc-533
T-P-2

ಗೋರಕ್ಷಣ
GORAKSHANA

9 ನೇ ವರ್ಷ — 1959 ನೇ ಜುಲೈ ತಾ || 28 July 59

Protect the Cow ಗೋಸಂರಕ್ಷಣೆ ಮಾಡಿ

ಗೋರಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಿಗುವುದು

Advertise in Goraksana and help the pious cause

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು

ಖುರಾನು-ಗೋವಧೆ

ಹಿಂದಿನ ಪುಟದಿಂದ

ವಾದ ನಡವಳಿಕೆಯನ್ನು ಕಂಡು ಅಧರ್ಮವೂ, ಕುಮಾರ್ಗವೂ ಅದ ದುಷ್ಕಾರ್ಯವೆಂದು ಅದನ್ನು ಎಣಿಸಿ, " ಹಸುವಿನ ಕರುವನ್ನು ದೇವರಿಗಾಗಿ ಮಾಡಿ ಕೊಂಡು ನಿಮ್ಮ ಆತ್ಮಗಳನ್ನು ಕೆಡಿಸಿ ಕೊಂಡಿರಿ. ನಿಮ್ಮ ದುರಾತ್ಮಗಳನ್ನು ಶಿಕ್ಷೆಗೊಳಿಸಿ " (1-2-54) ಎಂದು ಪ್ರಾರ್ಥನೆ ಮಾಡಿದನು. ಅದೇ ಪರಮ ಪೂಜ್ಯ ಜೀವಿಗಳಾದ ಗೋಮಾತೆಯರ ಮಾಂಸವನ್ನು ಭಕ್ಷಿಸಿ ಇರಬಹುದು,

ಆ ಕಾಲದಲ್ಲಿ ಸಿರಿಯಾದಲ್ಲಿ ಒಬ್ಬ ಧನವಂತನಿದ್ದನು. ಮಕ್ಕಳಿಲ್ಲದ ಆತನು ಧನಾಶೆಯಿಂದೆ ತನ್ನೈಶ್ವರ್ಯವಂತನನ್ನು ಯಾವನೋ ದಾಯಾದಿಯು ಕೊಂದುಹಾಕಿದನು. ಹಂತಕನನ್ನು ಗುರ್ತಿಸಲಾಗಲಿಲ್ಲ. ಜನರು ತಮ್ಮೊಳಗೇ ಪರಸ್ಪರ ಸತ್ಯದ ದೋಷವನ್ನು ಆರೋಪಿಸಿಕೊಳ್ಳುತ್ತಾ, ಜಗಳ ಕಾಯ್ಕೊಳ್ಳುತ್ತಿದ್ದರು — " ನಿಮ್ಮಾತ್ಮೀಯರು ಹೀಗೆ ಕಾದಾಡುತ್ತಿರುವುದು ನಿಜವಾಗಿ ಹಂತಕನ ಹೆಸರು ಬಯಲಾಗಲಿಕ್ಕಾಗಿ ನೀವು ಒಂದು ಗೋವನ್ನು ವಧೆಮಾಡಿ ತೆಗೆದುಕೊಂಡು ಆ ಗೋವಿನ ಲಕ್ಷಣಗಳು ಫಲಾನು ರೀತಿಯಲ್ಲಿರಬೇಕು " ಎಂದು ಪ್ರವಾದಿಯು ವ್ಯಕ್ತಪಡಿಸಿದನು. ತಮ್ಮ ಪ್ರವಾದಿಯ ಹೇಳಿಕೆಯನು ತಿಳಿಸಿದ ಲಕ್ಷಣಗಳುಳ್ಳ ಒಂದು ಗೋವು ಒಬ್ಬ ಒಡ ಗೃಹಸ್ಥನ ಮನೆಯಲ್ಲಿದ್ದುದನ್ನು ಆ ಯಹೂದ್ಯರು ಕಂಡುಕೊಂಡರು. ಅದರ ಚರ್ಮದ ತುಂಬಾ ಭಂಗಾರದ ನಾಣ್ಯಗಳನ್ನು ತುಂಬಿ ಕೊಡಬೇಕೆಂಬ ನಿಯಮದೊಂದಿಗೆ ಆ ಧೇನುವನ್ನು ಅವರಿಗೆ ಕೊಡಲು ಆ ಗೃಹಸ್ಥನು ಒಪ್ಪಿಗೆಯಿತ್ತನು ಯಹೂದ್ಯರಿಗೆ ಆದು ಒಪ್ಪಿಗೆ ಆಯಿತು. ತರುವಾಯ ಆಗೋವನ್ನು ತಂದು ಕೊಯ್ದು ಪ್ರವಕ್ತನು ಸೂಚಿಸಿದಂತೆ ಅದರ ದೇಹದಲ್ಲಿನ ಮಾಂಸವನ್ನು ಮರಣಹೊಂದಿದ ಮನ ಕಳೇಬರಕ್ಕೆ ಸೋಕಿಸಿದರು. ಆಗ

ಮರಣಹೊಂದಿದ ಶ್ರೀಮಂತನು ಜೀವಂತನಾಗಿ, ತನ್ನನ್ನು ಕೊಂದವನು ಫಲಾನಿ ಹೆಸರುಳ್ಳ ದಾಯಾದಿಯೆಂದು ಸ್ಪಷ್ಟವಾಗಿ ತಿಳಿಸಿ ಪುನಃ ಪುನಃ ಮರಣಹೊಂದಿದನು

ಯಾವ ಹೋಲಿಕೆಯಿಲ್ಲದ ಸುಳ್ಳು ಕತೆ ಇದೆಂದು ಪಾಠಕರು ಇದನ್ನು ಕುರಿತು ಭಾವಿಸುವರು : ಸ್ಥಿತ್ಯಪೇಕ್ಷ ಪ್ರದರ್ಶನ ಎಂದು ಹೊಗಳಲ್ಪಟ್ಟಿರುವ—ಈ-ನೀತಿಗೆ ಗಂಧವು, ನಮ್ಮ ಪುರಾಣಗಳಂತೆ ಸಂದರ್ಭಶುದ್ಧಿಯಾಗಲಿ, ಔಚಿತ್ಯ ವಿಚಾರವಾಗಲಿ ಸ್ವಲ್ಪವಾದರೂ ಕಾಣಬಂದ ಇಂಥಾ ಸುಳ್ಳು ಕಥೆಗಳಿಗೆ ಒಂದು ಮಹಾ ಸಮುದ್ರವು : ಮುಸಲ್ಮಾನರಲ್ಲಿಯಾಗಲೀ, ಯಹೂದ್ಯರಲ್ಲಿಯಾಗಲೀ ಗೋಮಾಂಸಖಂಡವನ್ನು ಸೋಕಿಸುವುದರಿಂದ ಸತ್ತವನು ಯಾವಾಗ ಜೀವಂತನಾಗುವಿಕೆಯೂ, ತನ್ನ ಶತ್ರುವನ್ನು ಕುರಿತು ಸಾಕ್ಷ್ಯವನ್ನು ಕೊಟ್ಟು ತಾನು ಪುನಃ ವ್ಯತನಾಗುವಿಕೆಯೂ ಈಗ ಎಲ್ಲಿಯೂ ನಡೆಯುವುದಿಲ್ಲವೆಂದು ಹೇಳಿದಲ್ಲಿ ಸುಳ್ಳಾಗಲಾರದು

ಇಲ್ಲಿ ಗೋವಧೆಯು ಅಪರಾಧದ ಪರಿಶೀಲನಾರ್ಥವಾಗಿ ಯಹೋದ್ಯರ ಮತದಲ್ಲಿ ಸಂಭವನಾಗಿವೆ ; ಇದರ ಮೂಲಕಥಾಯಹೂದ್ಯರಾದರೂ ಗೋಮಾಂಸಭಕ್ಷಕರಾಗಬೇಕೆಂಬುದು ಉದ್ದೇಶವಲ್ಲ : ಮೂಸಾಪ್ರವಕ್ತರ ಎಷ್ಟುಮಾತ್ರವಾಗಲಿ ಭಾವನೆಯೂ ಇಲ್ಲ : ಲೋಕದಲ್ಲಿಯ ಸರ್ವ ಪ್ರಜಾಕೋಟಿಗೆ ಖುರಾನಿನಿಂದ, ಖುರಾನಿನ ಮೂಲಕ ನಿರ್ಣಯಿಸಲ್ಪಟ್ಟ ಲೋಕೋತ್ತವಾದ ಆಹಾರವು ಪ್ರಕೃತಿಸಿದ್ಧವಾದ ಫಲಾಹಾರವೇ ; ದೈವಾಜ್ಞೆಯನ್ನು ಮೀರಿ ನಡೆಯಲು ಇಚ್ಛಿಸದ ಮುಸಲ್ಮಾನರಾದರೂ ಯಹೂದ್ಯ ಜಾತಿಯವರಿಗಾಗಿ ಉದ್ದೇಶಿಸಲ್ಪಟ್ಟಿರುವ ಈ ಕಥೆಯನ್ನನುಸರಿಸಿ, ಮಾನವ ನೈಜವಿರುದ್ಧವೂ, ರೋಗಕಾರಕವೂ ಆದ ಮಾಂಸಭಕ್ಷಣೆಗಾಗಿ ಗೋವಧೆ ಮಾಡುವದನ್ನು ಒಂದು ಹೆಕ್ಕಾಗಿ ಭಾವಿಸಕೂಡದು : ಭಾರತ ದೇಶದಲ್ಲೆಲ್ಲಾ ತಾಯಿಯಂತೆ

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಮೊನ್ನೆ ೇ ದಿವಸ ಮೈಸೂರಿನ ರಾಜ್ಯಪಾಲರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಬಿಡೆಯರ್ ಬಹದ್ದೂರ್ ರವರ ವರ್ಧಂತ್ಯುತ್ಸವವು ನೆರೆವೇರಿತು ; ಅರಮನೆ ಬತೇರಿಯಿಂದ ಕುಶಾಲ ತೋಪುಗಳು ಹಾರಿಸಲ್ಪಟ್ಟವು. ರಾಜಗುರು ಶ್ರೀ ಪರಕಾಲ ಸ್ವಾಮಿಯವರು ಅರಮನೆಗೆ ದಯಮಾಡಿಸಿವ ಹಾರಾರ್ಚನೆಗಳಿಂದ ಪಾದಪೂಜೆ ಸ್ವೀಕರಿಸಿ, ಆಶೀರ್ವಾದಪೂರ್ವಕ ಫಲಮಂತ್ರಾಕ್ಷತೆ ಪಿಲ್ಲಕ್ಕನ್ನು ಅನುಗ್ರಹಿಸಿದರು ; ಮಠದ ದೇವಸ್ಥಾನಗಳಿಂದ ತೀರ್ಥ ಪ್ರಸಾದಗಳು ಬಂದಿದ್ದವು ; ಬಂಧುಬಳಗದವರು ರಾಜ್ಯದ ಮಂತ್ರಿಗಳು, ಪಾರ್ಲಿಮೆಂಟ್ ಸಭಾಧ್ಯಕ್ಷರು, ಇತರ ಕೆಲ ಗಣ್ಯರೂ ಶುಭಾಶಯಗಳನ್ನು ಕೋರಿದರು

ಮಹಾರಾಜರವರಿಗೆ ಇತೋಽಭ್ಯಧಿಕ ಶುಭವಾದ ದಯಾರೋಗ್ಯ ಭಾಗ್ಯಗಳನ್ನು ಅನುಗ್ರಹಿಸಲೆಂದು ದಯಾಮಯನಾದ ಭಗವಂತನನ್ನು ' ಗೋರಕ್ಷಣ ' ಪ್ರಾರ್ಥಿಸುತ್ತದೆ.

ಗೋವಂಶಕ್ಕೆ ನಷ್ಟ ಹೇಗೆ ಸಂಭವಿಸಿತು ?

ಎಂದುವರೆಗೂ ನಮ್ಮ ಸಂಬಂಧವು ಜೀವದಿಂದಿರುವ ಗೋವುಗಳ ಸಂಬಂಧದೊಡನೆ ಮಾಡಿಕೊಂಡಿತ್ತೋ ಮತ್ತು ಗೋವುಗಳನ್ನು ವೀಯಿಸಲು ಜವಿಾನ್ನು ಖಾಲಿಯಾಗಿರುತ್ತಿತ್ತೋ ಅದುವರೆಗೂ ಗೋವಂಶಕ್ಕೆ ನಷ್ಟವು ಸಂಭವಿಸಲಿಲ್ಲ ಅಂದರೆ ಯಾವಾಗ ನಮ್ಮ ನಿತ್ಯಕಾಂಕ್ಷೆಗಳಲ್ಲಿ ತಮಿಗೆ ತಾವೇ ಸಾಯುದೆ ಕಸಾಯಿಯಿಂದ ಕೊಲ್ಲಲ್ಪಟ್ಟ ಹಸುವಿನ ತೊಗಲು ಕೊಬ್ಬು ರಕ್ತ ಎಲುಬಿನ ವ್ಯಾಪಾರವು ಹೆಚ್ಚಿತೋ ಆಗ ಸಾಯಿಸಲ್ಪಟ್ಟ ಗೋವುಗಳ ಬೆಲೆಯು ಜೀವಂತ ಗೋವುಗಳ ಬೆಲೆಯು ಹೆಚ್ಚಾಯಿತು ವನಸ್ಪತಿ ಕುಪ್ಪ ಹಾಲಿನಪುಡಿ ಮೊದಲಾದವುಗಳ ಪ್ರಭಾವವು ಹೆಚ್ಚಿತ್ತ ಗೋಮಾಳ ಭೂಮಿಯೂ ಇಲ್ಲದಂತಾಯಿತು ಸರ್ಕಾರದ ಅರಣ್ಯ ಶಾಖೆಯು ನೀತಿಯಿಂದ ಗೋವುಗಳು ಕಾಡುಗಳಲ್ಲಿ ಮೇಯುವುದೂ ಆಗದೆ ಹೋಯಿತು ದೇಶದಲ್ಲಿಯ ಓದು ಬಂಹಗಾರರೂ ಮತ್ತು ತಿಳುವಳಿಕೆಯುಳ್ಳವರೆಂದು ಕರೆಯಲ್ಪಡುವಂಥವರೂ ಮತ್ತು ಸರ್ಕಾರವೂ ಗೋವುಗಳ ವಿಷಯಕ್ಕೆ ಗಮನ ಕೊಡಲಿಲ್ಲ ೇದಿನಿಂದ ಗೋವುಗಳ ಹಾನಿಯು ಪ್ರಾರಂಭವಾಯಿತು 150 ವರ್ಷಗಳ ಹಿಂದಿನ ವರೆಗೆ ನಮ್ಮ ಭೋಜನ ವಸ್ತ್ರ ಹಾಗೂ ದಿನದ ಎಲ್ಲ ಪದಾರ್ಥಗಳೂ ಮುಂತಾದವುಗಳಿಗೆ ಪಥೆ ಮಾಡಲ್ಪಟ್ಟ ಗೋವುಗಳೆ ತೊಗಲು ಮೊದಲಾದುವು ಬೇಕಾಗುತ್ತಿರಲಿಲ್ಲ ಆ ಗಿನ ಕಾಲದಲ್ಲಿ ಮಾಂಜೆಯೆಂಬ ಹುಲ್ಲಿನಿಂದ ಮಾಡುತ್ತಿದ್ದರು

— ಸಶೇಷ

---

2 ದಿನಗಳಲ್ಲಿ ಕೇರಳ ಮುಂತ್ರಿಮಂಡಲ ವಜವಾಗುವದಾಗಿ ಶ್ರೀ ಪಟ್ಟಂತಾನು ಪಿಳ್ಳೈ ಕಳೆದ ದಿನ ತಿಳಿಸಿದರು

ಪೂರ್ಣ ಗೋಹತ್ಯಾ ನಿರೋಧ

ಬೆಂಗಳೂರು 9 — ಗೋ ನಿ. ಸಮಿತಿಯ ಕರ್ನಾಟಕ ಪ್ರಾಂತೀಯ ಸಂಯೋಜಕ ಶ್ರೀ ಹೊ. ವೆ ಶೇಷಾದ್ರಿಯವರು ಹೇಳಿಕೆಯೊಂದು, ಗೋಹತ್ಯಾ ನಿರೋಧದ ಕಾನೂನನ್ನು ಮೈಸೂರು ರಾಜ್ಯದ ಎಲ್ಲ ಭಾಗಗಳಿಗೂ ಸಮಾನವಾಗಿ ಅನ್ವಯಿಸುವಂತೆ ಒಂದು ಮಸೂದೆಯನ್ನು ವಿಧಾನ ಸಭೆಯಲ್ಲಿ ತರುವುದಾಗಿ ನಮ್ಮ ಮೈಸೂರಿನ ಮಾನ್ಯ ಮುಖ್ಯ ಮಂತ್ರಿ ಶ್ರೀ ಬಿ. ಡಿ. ಜತ್ತಿ ಅವರು ಮೊನ್ನೆ ಗುಲ್ಬರ್ಗಾದಲ್ಲಿ ಇಷ್ಟು ಶಡವಾಗಿಯಾದರೂ ಆಶ್ವಾಸನೆ ಇತ್ತುದಾಗಿ ಪತ್ರಿಕೆಯಲ್ಲಿ ಓದಲು ಯಾರಿಗೆ ತಾನೆ ಸಂತೋಷವಾಗದು ? ಆದರೆ ತುರ್ತಿನ ಇತರ ವಿಷಯಗಳಿರುವುದರಿಂದ ಆ ಮಸೂದೆಯನ್ನು ಮುಂದಿನ ವಿಧಾನ ಸಭೆ ಅಧಿವೇಶನದಲ್ಲಿ ತೆಗೆದುಕೊಳ್ಳಲಾಗುವುದಿಲ್ಲ ಎಂದು ಅವರಂದಿರುವುದು ಖೇದಕರ್ಕವಾದ ಸಂಗತಿ ! ನಮ್ಮೆಲ್ಲರಿಗೂ ಪೂಜ್ಯವಾದ ಲಕ್ಷಾವಧಿ ಗೋವುಗಳ ಚಿತ್ರಹಿಂಸೆ ಹಾಗೂ ಘೋರಹತ್ಯೆ ನಿಲ್ಲಿಸುವುದಕ್ಕಿಂತ ತುರ್ತಾದ ರಾಷ್ಟ್ರೀಯ ಕರ್ತವ್ಯ ಇನ್ನಾವುದೋ ನಾವು ಕಾಣೆವು ಗೋಹತ್ಯೆ ಬಗ್ಗೆ ಸಮಸ್ತ ಜನ ತೀವ್ರ ಕಳವಳ, ಪ್ರತಿಭಟನೆ, ಕಳೆದ ವರ್ಷದ ಗೋ. ನಿ ಸಮಿತಿಯ ಚಳುವಳಿಯಲ್ಲಿ ಸಹ ಎಷ್ಟು ಪ್ರಬಲವಾಗಿ ಪ್ರಕಟವಾಗಿದೆ ! ಎಂದಿರುವರು. ಅವರು ತಮ್ಮ ಹೇಳಿಕೆಯನ್ನು ಮುಂದುವರಿಸಿ ಬಂಲರುವ ಅಧಿವೇಶನದ ಪ್ರಪ್ರಥಮದಲ್ಲೇ ಗೋಮಾಂಸದ ದಾಸ್ತಾನು ಹಾಗೂ ಮಾರಾಟದ ಮೇಲೆ ನಿರ್ಬಂಧ ವನ್ನೊಳಗೊಂಡ ಗೋಹತ್ಯ ನಿರೋಧ ಮಸೂದೆಯನ್ನು ಸರ್ಕಾರವು ತರಬೇಕೆಂದು ವಿನಂತಿಸುತ್ತೇನೆ ಎಂದರು

ಯಾವಾತನು ಬೇರೆಯವರ ಗೋವಿಗೆ ಮುಷ್ಟಿ ಹುಲ್ಲನ್ನು ಒಂದು ವರ್ಷದ ವರೆಗೂ ಕೊಡುವನೋ, ಅಂತಹ ಮನುಷ್ಯನು ಪುತ್ರರು, ಕೀರ್ತಿ, ಸಂಪತ್ತು ಮತ್ತು ಸೌಭಾಗ್ಯಗಳನ್ನು ಹೊಂದುವನು

ದಿವ್ಯವಾಣಿ

ಯಾರು ಗೋಸಂರಕ್ಷಣೆಯನ್ನು ಮಾಡುವುದಿಲ್ಲವೋ ಮೃತಪಶ್ಚಾತ್ತಾಪರಾದ ಆ ಮನುಷ್ಯರಿಂದ ಮಂಡಾನಂತರ ಸೂರ್ಯಪುತ್ರನಾದ ಯಮನು ಯಾವಾಗಲೂ ಹೆದರಿಸುತ್ತಾ, ಶಿಕ್ಷಿಸುತ್ತಿದ್ದು ನಂತರಗಳಿಂದ ಬಿಡುವುದೇ ಇಲ್ಲ.

ಖುರಾನು-ಗೋವಧೆ

ಇದುವರೆಗೂ ಖುರಾನಿನ ಖುದಾ ನಿರ್ಧರಿಸಿದ ಆಹಾರ ವಿಶೇಷಣವನ್ನು ಕುರಿತ. ತಿಳಿಸಲ್ಪಟ್ಟಿದೆ ಇನ್ನು ಗೋ ಪೂಜೆ ಮತ್ತು ಗೋವಧೆಯ ವಿಷಯ ತಿಳಿಸಲ್ಪಡುವುದು. ಇದು ಖುರಾನಿನಲ್ಲಿಯ ' ಸೂರಯೆ ಬಖರಾ ವ.ದನೀ ' ಎಂಬ ಪರಿಚ್ಛೇದದಲ್ಲಿ ವರ್ಣಿಸಲ್ಪಟ್ಟಿದೆ ಗೋಕಥೆಯನ್ನು ಕುರಿತ ಅಧ್ಯಾಯವಾದುದರಿಂದ ಇದು ಸೂರಯೇ ಬಖರಾ ಆ ಕಾಲದಲ್ಲಿಯೂ ಕೂಡ ಗೋಪೂಜೆ ಇದ್ದಿತೆಂಬುದನ್ನು ಈ ಕೆಳಗಿನ ಅಂಶವು ತಿಳಿಸುತ್ತದೆ.

ಮೂಸಾ ಪ್ರವಕ್ತನು ಫಿರಾನುಪ್ರಭುವಿನ ವಶದಿಂದ ಯಹೂದ್ಯರನ್ನು ತಪ್ಪಿಸಿ ಸುರಕ್ಷಿತ ಸ್ಥಾನಕ್ಕೆ ಸೇರಿಸಿ, ಅವರಿಗೆ ಅವಶ್ಯಕವಾದ ಧರ್ಮ ಶಾಸ್ತ್ರವನ್ನು ಖುದಾವಿನಿಂದ ಪಡೆಯಲು ತೂರು ಪರ್ವತಕ್ಕೆ ಹೋಗಿ ನೆಲವತ್ತು ದಿನಗಳ ಕಾಲ ಉಪವಾಸ ಮಾಡಬೇಕಾಯಿತು. ಆ ಸಂದರ್ಭದಲ್ಲಿ ' ಸಾವಿರ್ ' ಎಂಬ ಹೆಸರಿನ ಅಗಸಾಲಿಗನು ಅಕಳ ಕರುವಿನ ವಿಗ್ರಹ ಮಾಡಿ, ಯಹೂದ್ಯರಿಗೆ ಅದನ್ನು ಕೊಟ್ಟನು, ಅವರು ಆ ವಿಗ್ರಹನನ್ನು ಆರಾಧನೆ ಮಾಡಲು ಮೊದಲಿಟ್ಟರು ತೂರು ಪರ್ವತದಿಂದ ಮೂಸಾ ಪುನಃ ಬಂದು, ತನ್ನ ಪ್ರಜೆಗಳ ಆಶ್ಚರ್ಯಕರ

— ಮೊದಲನೇ ಪುಟ ನೋಡಿ

ಗೂಳಿ ಕಾಟ

ಬಳ್ಳಾರಿ 20 — ಹಡಗಲಿ ತಾಲ್ಲೂಕಿನ ಇಟಗಿ ಗ್ರಾಮದವನೊಬ್ಬನು ದೇವಸ್ಥಾನದ ಗೂಳಿಯನ್ನು ಕಡ್ಡಿಯಿಂದ ಹೊಡೆದನು ಈಗ ಎರಡು ದಿನವೂ ಅವನನ್ನು ಅಟ್ಟಿಸಿಕೊಂಡು ಹೋಗುವದು. ಆತನು ಜಿಲ್ಲಾ ಕೋರ್ಟಿಗೆ ಅರ್ಜಿ ಸಲ್ಲಿಸಿ ತನ್ನ ಪ್ರಾಣ ರಕ್ಷಿಸಲು ಗೂಳಿಯನ್ನು ಕೊಲ್ಲುವಂತೆ ವಕೀಲಮುಖಾಲಕ ಕೋರಿದ. ಅವನ ರಕ್ಷಣೆಗೆ ಕಾನೂನಿನಲ್ಲಿ ಅವಕಾಶ ಇಲ್ಲದುದರಿಂದ ನ್ಯಾಯಾಧಿಪರು ಸಹಾನುಭೂತಿ ತೋರಿದರು

★

ಬೆಂಗಳೂರು 24 — ದೇವಾಲಯ ಹಾಗೂ ಧರ್ಮಿಕ ಸಂಸ್ಥೆಗಳ ಬಳಿ ಪ್ರಾಣಿವಧೆಯನ್ನು ನಿಷೇಧಿಸುವ, ರಾಜ್ಯಕ್ಕೆಲ್ಲಾ ಅನ್ವಯಿಸುವಂತಹ ಕಾನೂನನ್ನು ಜಿಲ್ಲೆರಿಗೆ ಕರಡು ಸರ್ಕಾರ ನಿರ್ಧರಿಸಿ ಆ ಬಗ್ಗೆ ರಚಿತವಾದ ಕಾನೂನನ್ನು ಪ್ರಕಟಿಸಿದ್ದಾರೆ.

ವುಡ್‌ಲ್ಯಾಂಡ್ಸ್ ಜಯಪ್ರದ 3 ನೇ ವಾರ

ಬೇದರ್ದ್ ಜಮಾನ ಕಾ ಜಾನೆ

ಶಿ (ಹಿಂದಿ)

ತಾರಾಗಣ : ಅಶೋಕ್ ಕುಮಾರ್, ನಿರೂಪರಾಯ್, ಪ್ರಾಣ್, ಜೀವನ್, ಹೆಲೆನ್

ಜೀವನದ ಅಗುಹೋಗುಗಳನ್ನು ಹೃದಯಂಗಮವಾಗಿ ಚಿತ್ರೀಕರಿಸಿರುವ

ದಿನವಹಿ 3 ಪ್ರದರ್ಶನಗಳು] ಅತ್ಯುತ್ತಮ ಕಲಾಕೃತಿ

ಅಪೆರಾ— ಜನಭರಿತ 2 ನೇ ವಾರ

ವೀರ ಭಾಸ್ಕರುಡು (ತೆಲುಗು)

ಪ್ರಧಾನ ಪಾತ್ರಧಾರಿಗಳು— ಎಸ್. ವರಲಕ್ಷ್ಮಿ, ಕನ್ನಾಂಬಾ, ಸೂರ್ಯಕಲಾ, ರೇಲಂಗಿ ಸೂರ್ಯಕಾಂತಂ, ರಾಜನಾಲ, ಬಾಲಕೃಷ್ಣ, ಉದಯಕುಮಾರ್

— ದಿನ 3 ಆಟಗಳು —

ಗೋಂಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



SHAKTI SUDHA

A Superb Tonic

ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ ಅಶೋಕಾ ಫಾರ್ಮಸಿ ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

For Quality Printing L. N. Press Sivarampet, Mysore

Edited, Printed & Published by Dharma Prachara Nitya M S Krishna Rao, at the Satyavadi Press, Chamarajapuram Mysore.